( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )
ದಿಃ 06/04/2021
ಅಸಲು ದಾವೆ.ನಂ. 281/2017
ಪಿ.ಡಬ್ಲ್ಯೂ5

| | | |
|---|---|---|
| ಸಾಕ್ಷಿಯ ಹೆಸರು | | ಬಿ.ಎಸ್. ಪ್ರಕಾಶ್ |
| ಗಂಡ/ ತಂದೆ ಹೆಸರು | ಃ | ಸುಬ್ರಮಣ್ಯ ಶೆಟ್ಟಿ |
| ವಯಸ್ಸು | ಃ | 58 ವರ್ಷ |
| ಉದ್ಯೋಗ | ಃ | ಎ.ಡಿ.ಎಲ್.ಆರ್. ಅರಕಲಗೂಡು |
| ವಿಳಾಸ | ಃ | ಸೋಮವಾರಪೇಟೆ |

( ಮುಖ್ಯ ವಿಚಾರಣೆಃ ಎಂ.ವೈ.ಪಿ. ವಕೀಲರಿಂದಃ )

ದೊಡ್ಡಮಗ್ಗೆ ಹೋಬಳಿ, ಯಲಗತವಳ್ಳಿ ಗ್ರಾಮದ ಸ.ನಂಃ 87/3 ರ 5 ಎಕರೆ 9 ಗುಂಟೆ ಪೈಕಿ 1 ಎಕರೆ 12 ಗುಂಟೆ ಲಕ್ಷ್ಮಮ್ಮನವರ ಹೆಸರಿಗೆ ಪೋಡಿಯಾದ ಬಗ್ಗೆ ಪಕ್ಕಾ ಬುಕ್ ನ ದೃಡೀಕೃತ ನಕಲನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ-21 ಎಂದು ಗುರುತಿಸಲಾಯಿತು. ಸ.ನಂಃ 87/3 ವಿಂಗಡಣೆಯಾಗಿ ಸ.ನಂಃ 87/4 ಮತ್ತು 5 ಎಂದು ದಿಃ05-05-2015 ರಂದು ಪೋಡಿಯಾಗಿರುತ್ತದೆ. ಆ ಬಗ್ಗೆ ಟಿಪ್ಪಣಿಯ ದೃಡೀಕೃತ ನಕಲನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ-22 ಎಂದು ಗುರುತಿಸಲಾಯಿತು. ದುರಸ್ತಿನ ಪ್ರಕಾರ ಲಕ್ಷ್ಮಮ್ಮನವರ ಹೆಸರಿಗೆ 1 ಎಕರೆ 12 ಗುಂಟೆ ಸ.ನಂಃ 87/4 ರಲ್ಲಿ ಪೋಡಿಯಾಗಿರುತ್ತದೆ. ದುರಾಸ್ತಾದ ನಂತರ ಪಹಣಿಗೆ ಇಂಡೀಕರಿಸಲು ತಾಲ್ಲೂಕು ಕಚೇರಿಗೆ ರವಾನಿಸಲಾಗುತ್ತದೆ.

<u>ಪಾಟೀ ಸವಾಲುಃ ಶ್ರೀ. ಎಸ್.ಪಿ.ಜೆ. ವಕೀಲರಿಂದ 1, 3 ಮತ್ತು 4 ನೇ ಪ್ರತಿವಾದಿಯರ ಪರವಾಗಿಃ</u>

ದಿಃ23-02-2015 ರಂದು ಲಕ್ಷ್ಮಮ್ಮನವರು ಅರುಣಾಕ್ಷಿ ಎಂಬುವವರಿಗೆ 1 ಎಕರೆ ಕ್ರಯ ಮಾಡಲು ದುರಸ್ತು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅರ್ಜಿಯೊಂದಿಗೆ ಕ್ರಯ ಕರಾರು ಪತ್ರ ನಮ್ಮ ಕಡತದಲ್ಲಿ ಲಭ್ಯವಿಲ್ಲ. ಸ.ನಂಃ 87/4 ರ ಚೆಕ್ಕು ಬಂದಿಃ ಪೂರ್ವಕ್ಕೆ 87/5, ಪಶ್ಚಿಮಕ್ಕೆ ಸ.ನಂಃ 87/3, ಉತ್ತರಕ್ಕೆ ಲಾಗು ಹಿಸ್ಸೆ ಸ.ನಂಃ 87/2, ದಕ್ಷಿಣಕ್ಕೆ ಸ.ನಂಃ 85 ಮತ್ತು 86 ಬರುತ್ತದೆ. ಸ.ನಂಃ 85 ಮತ್ತು 86 ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ. ಇಂತಹ ದಾಖಲೆ ತಗೆದುಕೊಂಡು ಬನ್ನಿ ಎಂದು ನ್ಯಾಯಾಲಯದಿಂದ ಆದೇಶ ಮಾಡಿರುವುದಿಲ್ಲ. ಸ.ನಂಃ

87/4 ರ ಪೋಡಿ ಸಂಬಂಧ ದಾಖಲೆಗಳನ್ನು ತರುವಂತೆ ನ್ಯಾಯಾಲಯದಿಂದ ನೋಟೀಸ್ ಬಂದಿರುತ್ತದೆ. ನಾನು ಸರ್ವೆ ನಂಃ 87/3 ರ ಪೋಡಿ ಮಾಡಿಲ್ಲ. ನನ್ನ ಹಿಂದಿನ ಅಧಿಕಾರಿಗಳು ಮಾಡಿರುತ್ತಾರೆ. ನಾನು ದಾಖಲಾತಿಗಳ ಆಧಾರದ ಮೇಲೆ ಸಾಕ್ಷಿಯನ್ನು ನುಡಿಯುತ್ತಿದ್ದೇನೆ.

ಪಾಟೀ ಸವಾಲುಃ 2 ನೇ ಪ್ರತಿವಾದಿಯ ಪರ ವಕೀಲರು ಏನು ಇಲ್ಲ ಎಂದು ನುಡಿದಿರುತ್ತಾರೆ.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

**ಓ.ಹೇ.ಕೇ.ಸ.ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಜೆ.ಎಂ.ಎಫ್.ಸಿ,ಅರಕಲಗೂಡು.**